



ಕಮಿಶನಿಂಗ್ ಸಂಪಾದಕನಾಗಿದ್ದೆ. 'ಕುಸುಮಬಾಲೆ'ಯ ಅನುವಾದಕ್ಕೆ ಸೂಸನ್ ಡೇನಿಯಲ್ ಅಪಾರ ಶ್ರಮ ಹಾಕಿದ್ದರೂ, ಅದಕ್ಕೆ ಸಂಪಾದಕೀಯ ಸಹಾಯದ ಅಗತ್ಯವಿದೆ ಅನ್ನಿಸಿದಾಗ, ಯೇಲ್ ವಿಶ್ವವಿದ್ಯಾಲಯದ ಪದವಿ ಪಡೆದು ಕನ್ನಡ ರಂಗಭೂಮಿಯ ಅಧ್ಯಯನಕ್ಕೆಂದು ಕರ್ನಾಟಕಕ್ಕೆ ಬಂದು ನೆಲೆಸಿ, 'ಆ ದಿನಗಳು' ಚಿತ್ರದಲ್ಲಿ ಅಭಿನಯಿಸಿ ಜನಪ್ರಿಯರಾಗಿದ್ದ ಚೇತನ್ ಒದಗಿಬಂದರು. ಅಷ್ಟಾದರೂ, 'ಕುಸುಮಬಾಲೆ'ಯ ಹಾದಿ ಸುಗಮವಾಗಿರಲಿಲ್ಲ. ಗಾತ್ರದಲ್ಲಿ ತುಂಬ ಕಿರಿದಾದ್ದರಿಂದ, ಕಾದಂಬರಿ ಎಂದು ಪ್ರಚಾರ ಮಾಡಲಾಗದ ಕುಸುಮಬಾಲೆಯನ್ನು ಪ್ರಕಟಿಸುವುದೋ ಬೇಡವೋ ಎಂಬ ದೊಡ್ಡ ಚರ್ಚೆಯೇ ನಡೆದಿತ್ತು. ಪ್ರೆಸ್ ಆರಂಭಿಸಿದ್ದ 'ನಾವೆಲ್ಲ ಸೀರೀಸ್'ನಲ್ಲಿ ಪ್ರಕಟಿಸಿದರೆ ಹೇಗೆ ಎಂದು ಸೀರೀಸ್ ರೂಪಿಸಿದ್ದ ಸಂಪಾದಕರೊಬ್ಬರು ಇನ್ನಿಲ್ಲದ ಕುತಂತ್ರವನ್ನೇ ನಡೆಸಿದರು. ಕೊನೆಗೆ, 'ಕಾದಂಬರಿ' ಎಂದು ಕನ್ನಡ ವಿಮರ್ಶಕರಿಬ್ಬರಿಂದ ದೃಢೀಕರಿಸಿದರೂ ಪರಿಸ್ಥಿತಿ ಸುಧಾರಿಸಿರಲಿಲ್ಲ. ನನ್ನ ವೈಯುಕ್ತಿಕ ಒತ್ತಡದಿಂದಾಗಿ 'ಕುಸುಮಬಾಲೆ' ಕೊನೆಗೂ ಪ್ರಕಟವಾಯಿತು. 'ಕುಸುಮಬಾಲೆ'ಗೆ ಮಾಡಿಕೊಟ್ಟ ಕೆಲಸದಿಂದ ಉತ್ತೇಜಿತರಾದಂತೆ ಕಂಡುಬಂದ ಚೇತನ್, 'ಮಲೆಗಳಲ್ಲಿ ಮದುಮಗಳು' ಕೃತಿಯನ್ನು ಅನುವಾದಿಸುವ ಇಚ್ಛೆಯನ್ನು ನನ್ನೊಂದಿಗೆ ಹಂಚಿಕೊಂಡಿದ್ದರು. ಅವರದಕ್ಕೆ ನ್ಯಾಯ ಸಲ್ಲಿಸಬಲ್ಲರು ಎಂದು ಆಗ ನನಗನ್ನಿಸಿದ್ದೂ ಉಂಟು. ಆದರೆ, ಅದರ ತೊಡಕಿನ ಬಗ್ಗೆ ಅವರೊಂದಿಗೆ ಹಂಚಿಕೊಂಡಿದ್ದರಿಂದಾಗಿ ಅವರು ಬೇರೆ ದಾರಿಯಿಲ್ಲದೆ ಸುಮ್ಮನಾಗಬೇಕಾಯಿತು.

'ಕುಸುಮಬಾಲೆ'ಗೆ ತಮ್ಮೆಲ್ಲ ಶ್ರಮವನ್ನು ಧಾರೆಯೆರೆದದ್ದಕ್ಕೆ ಸೂಸನ್ ಡೇನಿಯಲ್‌ರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿ ದೊರಕಿದ್ದು ಬಿಟ್ಟರೆ, ದೊಡ್ಡ ಪ್ರಶಂಸೆಯೇನೂ ದೊರಕಲಿಲ್ಲ. 'ಕುಸುಮಬಾಲೆ' ಇಂಗ್ಲಿಷ್ ಅನುವಾದ ಕುರಿತು ಬಂದ ರಿವ್ಯೂಗಳಲ್ಲಿ ಹೆಚ್ಚಿನವು ಕೃತಿಯನ್ನು, ಕೃತಿಕಾರರನ್ನು ಕುರಿತು ಬರೆದಿದ್ದವೇ ಹೊರತು, ಅನುವಾದದ ಕುರಿತು ಹೆಚ್ಚೇನನ್ನೂ ಬರೆಯಲಿಲ್ಲ. ಅದರಲ್ಲೂ 'ದಿ ಬುಕ್ ರಿವ್ಯೂ' ಎಂಬ ಪತ್ರಿಕೆಯಲ್ಲಿ ಬಂದ 'ಕುಸುಮಬಾಲೆ' ಕುರಿತ ಅತ್ಯಂತ ದೊಡ್ಡ ರಿವ್ಯೂವಂತೂ ಅನುವಾದದ ಬಗ್ಗೆ ಒಂದು ಸಾಲು ಹೇಳಿದ್ದರೆ ಹೆಚ್ಚು. ಎಷ್ಟೆಲ್ಲ ರಿವ್ಯೂಗಳು ಬಂದರೂ, 'ಕುಸುಮಬಾಲೆ' ಇಂಗ್ಲಿಷ್ ಅನುವಾದ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಯಾವ ದೊಡ್ಡ ಸದ್ದನ್ನೂ ಸುದ್ದಿಯನ್ನೂ ಮಾಡದೆ ಮರೆಯಾಯಿತು. ಈ ಸಾಲಿಗೆ ಅನಂತಮೂರ್ತಿಯವರ ಆತ್ಮಕಥನವಾದ 'ಸುರಗಿ'ಯ ಇಂಗ್ಲಿಷ್ ಅನುವಾದ ಕೂಡ ಸೇರುತ್ತದೆ. ಕನ್ನಡದಲ್ಲಿ ಅದರ ಎಡಿಟಿಂಗ್ ಸರಿಯಾಗಿ ಆಗಿಲ್ಲವೆಂದು, ಇಂಗ್ಲಿಷ್‌ನಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಬಹುದೇ ಎಂದು ನಾನು ಅವರನ್ನು ಕೇಳಿದ್ದಾಗ 'ನಿಮ್ಮ ಅನಿಸಿಕೆ ಸರಿಯಾಗಿದೆ, ಹಾಗೆಯೇ ಮಾಡಿ' ಎಂದು ಹೇಳಿದ್ದರು. ಅದಾದ ಕೆಲ ತಿಂಗಳುಗಳಲ್ಲಿ ಅವರು ಕಾಲವಾದ ನಂತರ, ಕನ್ನಡ ಮೂಲದಲ್ಲಿರುವಂತೆಯೇ ಅನುವಾದವಾಗಿ ಪ್ರಕಟವಾಯಿತು. ಯೋಜನೆಯನ್ನು ಶುರುಮಾಡಿ, ಕಾಪಿರೈಟ್ ಹಂತದವರೆಗಿದ್ದ ನಾನು, ನಂತರದ ಕೆಲ ತಿಂಗಳುಗಳಲ್ಲಿ ಪ್ರೆಸ್ ತೊರೆದಿದ್ದೆ.

'ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್'ನಲ್ಲಿ ನನಗಾದ ಅನುಭವಗಳು ಅನುವಾದದ ಬಗ್ಗೆ ಮಾತ್ರವಲ್ಲ, ಅನುವಾದ ರಾಜಕಾರಣ, ಸಾಂಸ್ಕೃತಿಕ ರಾಜಕಾರಣದ